ನೂರೊಂದು ಮತಗಳಲ್ಲಿ ಛಿದ್ರವಾದುದು ಹಿಂದೂ ಸಮಾಜ. ಹಲವು ಸ್ವಾರ್ಥಿಗಳಂತೂ, ಮತದ ಹೆಸರಲ್ಲಿ, ದೇವರ ಹೆಸರು ಹೇಳಿ ಮುಗ್ಧ ಜನರಿಗೆ ಇಲ್ಲಸಲ್ಲದ ಕಟ್ಟು ಕತೆಗಳನ್ನು ಹೇಳಿ, ಮೂಢನಂಬಿಕೆಯ ಹಗ್ಗದಲ್ಲಿ ಬಲವಾಗಿ ಅವರನ್ನು ಬಿಗಿದು, ಅತ್ಯಂತ ಹೇಯ ಕೃತ್ಯಗಳನ್ನು ಮಾಡುತ್ತಿದ್ದರು. ದಯಾನಂದರಿಗೆ ಅತ್ಯಂತ ನೋವುಂಟು ಮಾಡಿದ ಒಂದು ಆಚರಣೆಯಂತೂ ಅವರ ಹೃದಯವನ್ನೇ ಛಿದ್ರವಾಗಿಸಿತ್ತು. ಕೃಷ್ಣನ ಹೆಸರಿನಲ್ಲಿ ನಡೆಯುತ್ತಿದ್ದ ಅನಾಚಾರವದು. 'ಶ್ರೀಕೃಷ್ಣಾರ್ಪಣ' ಎಂದು ಹೇಳಿ ಹೊನ್ನಿನೊಂದಿಗೆ ತಮ್ಮ ಸ್ವಂತ ಪುತ್ರಿಯರು, ಸೋದರಿಯರು, ನವವಿವಾಹಿತ ಪತ್ನಿಯರನ್ನು ಸಹ ಈ ಗುರುವೆಂದು ಹೇಳಿಕೊಳ್ಳುವವನ ಚರಣಕ್ಕೆ ಸಮರ್ಪಿಸಿ, ಆತನ ದೈಹಿಕ ಉಪಭೋಗದ ನಂತರವೇ ತಾವು ಆ ನಾರಿಯರನ್ನು ಅನುಭವಿಸುವ ಹೇಸಿಗೆಯ ಅನಾಚಾರ ಧರ್ಮದ ಹೆಸರಲ್ಲಿ ನಡೆಯುತ್ತಿತ್ತು. 'ಓ ಪಥಭ್ರಷ್ಟ ಬಾಂಧವರೇ, ನಿಮ್ಮ ದುರಾಚಾರಿಗಳಾದ ಮತೀಯ ಸಾಧುಗಳ ಸೋಗಿಗೆ ಸೋತು ಮಹಾಪಾಪಕ್ಕೆ ಗುರಿಯಾಗಬೇಡಿ. ಮಹಾಯೋಗೇಶ್ವರನಾದ ಕೃಷ್ಣನ ಪವಿತ್ರ ನಾಮವನ್ನು ದುರುಪಯೋಗಕ್ಕೆ ಎಡೆಗೊಡಬೇಡಿ. ಈ ಪಶು ಪ್ರವೃತ್ತಿಯ ಸೋಗಿನ ಗುರುಗಳನ್ನು ಗದ್ದಿಗೆಯಿಂದ ಕೆಳಕ್ಕೆ ತಳ್ಳಿರಿ. ಮಾನವರಾಗಿ, ಮಾನವರಂತೆ ಬಾಳಲು ಕಲಿಯಿರಿ' ಎಂದು ದಯಾನಂದರು ಗರ್ಜಿಸತೊಡಗಿದರು. ಆ ಮತ ಸಂಪ್ರದಾಯದಲ್ಲಿ ಎಲ್ಲಿಲ್ಲದ ಆಂದೋಲನವುಂಟಾಯಿತು. ದಯಾನಂದರ ಮೇಲೆ ವಿಷ ಪ್ರಯೋಗದ ಮತ್ತೊಂದು ಯತ್ನ ನಡೆಯಿತು.

## 'ಪಾಪ' ಮುಳುಗಿದರೆ ಹೋಗುವುದಲ್ಲ

1867ನೇ ಇಸವಿ ಮಾರ್ಚ್ ತಿಂಗಳಲ್ಲಿ ದಯಾನಂದರು ಹರಿದ್ವಾರಕ್ಕೆ ಬಂದರು. ಕುಂಭೋತ್ಸವಕ್ಕೆ ಒಂದು ತಿಂಗಳು ಮೊದಲೇ ಧರ್ಮ ಪ್ರಚಾರವನ್ನು ಆರಂಭಿಸಿದರು. ಹತ್ತು ಲಕ್ಷ ಜನರಾದರೂ ಅಲ್ಲಿ ಕಿಕ್ಕಿರಿದಿದ್ದರು. 'ಹರಕೀ ಪೌಡಿ'ಯಲ್ಲಿ ಒಂದು ಮುಳುಗು ಹಾಕಿ ತಮ್ಮ ಜನ್ಮ ಜನ್ಮಾಂತರದ ಪಾಪವನ್ನು ಕಳೆದುಕೊಳ್ಳಲು ಬಂದ ಜನ!

ಅತ್ತ 'ಒಂದು ಮುಳುಗು ಹಾಕಿದರೆ ಸಾಕು ಪಾಪ ನಿವಾರಣೆ' ಎನ್ನುವ ಪಂಡಿತರ ತಂಡ. ನೂರಾರು ಮತಗಳ ಮಹಂತರು, ಮಠಾಧೀಶರು ಅಲ್ಲಿಗೆ ರಾಜವೈಭವದಿಂದ ತಮ್ಮ ಹಿಂಬಾಲಕರೊಡನೆ ಆಗಮಿಸಿ ಬೀಡು ಬಿಟ್ಟಿದ್ದರು. ಹಣ ಗಳಿಸುವ ಅದ್ಭುತ ಅವಕಾಶ ನೋಡಿ, ಪೂಜಾರಿಗಳು, ಪುರೋಹಿತರು, ಪೌರಾಣಿಕರೂ ಸಾವಿರ ಸಂಖ್ಯೆಯಲ್ಲಿ ಗಂಗಾತೀರದಲ್ಲಿ ನೆರೆದಿದ್ದರು. ಪಾಪ ಪುಣ್ಯದ ಕತೆ ಹೇಳಿ, ಪೂಜೆ ಪುನಸ್ಕಾರಗಳೆಂದು ಜನರಿಂದ ಹಣ ಸುಲಿಗೆಯಾಗುತ್ತಿತ್ತು.

ಇಂತಹ ಜನ ಮರುಳೋ, ಜಾತ್ರೆ ಮರುಳೋ ಎಂಬ ಮೇಳದಲ್ಲಿ, ಈ ವೀರ ಸನ್ಯಾಸಿ ದಯಾನಂದರು ಏಕಾಂಗಿಯಾಗಿ ನಿಂತು, 'ಯಾವ




ಬೆಂಗಳೂರಿನ ವಿಶ್ವೇಶ್ವರಪುರಂನಲ್ಲಿರುವ ಆರ್ಯಸಮಾಜ

> ಓ ಪಥಭ್ರಷ್ಟ ಬಾಂಧವರೇ, ನಿಮ್ಮ ದುರಾಚಾರಿಗಳಾದ ಮತೀಯ ಸಾಧುಗಳ ಸೋಗಿಗೆ ಸೋತು ಮಹಾಪಾಪಕ್ಕೆ ಗುರಿಯಾಗಬೇಡಿ. ಮಹಾಯೋಗೇಶ್ವರನಾದ ಕೃಷ್ಣನ ಪವಿತ್ರ ನಾಮವನ್ನು ದುರುಪಯೋಗಕ್ಕೆ ಎಡೆಗೊಡಬೇಡಿ. ಈ ಪಶು ಪ್ರವೃತ್ತಿಯ ಸೋಗಿನ ಗುರುಗಳನ್ನು ಗದ್ದಿಗೆಯಿಂದ ಕೆಳಕ್ಕೆ ತಳ್ಳಿರಿ. ಮಾನವರಾಗಿ, ಮಾನವರಂತೆ ಬಾಳಲು ಕಲಿಯಿರಿ...
>
> -ಸ್ವಾಮಿ ದಯಾನಂದ ಸರಸ್ವತಿ